Regd No M 1299 34 th Year M. Edn. ತಾ॥ 2—1—51

ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯುರು { ಬಿಡಿ ಪ್ರತಿ 3 ಪೈ

ಪೂರ್ಣಯ ಹಳೇ ಪತ್ರಿಕೆ ನಿಂತಿತು

ಇಂದಿನಿಂದ ಪೂನಾದ '' ಧ್ಯಾನಪ್ರಕಾಶ '' ಪತ್ರಿಕೆ ಪ್ರಕಟಣೆ ನಿಂತಿದೆ. ಈ ಪತ್ರಿಕೆ 103 ವರ್ಷಗಳ ಹಿಂದೆ ಸ್ಥಾಪಿತವಾಗಿತ್ತು.

ಪಾಟಿಯಾಲಾ ವಕೀಲರುಗಳಿಗೆ ಪಡಿತರ ಮೇಲೆ ಮತ್ತೆ ಐದು ಷೇರು ಸಕ್ಕರೆ ಹೆಚ್ಚಾಗಿ ಕೊಡಲಾಗುವುದು.

Kann. (Eng. 437)

ಪ್ರಾಚೀನ ಇಂಡಿಯನರ ಬುದ್ಧಿ

ಸಾಮಾನ್ಯವಾಗಿ ಇಂಡಿಯನ್ನರ ಬಗ್ಗೆ ನಮ್ಮ ಜ್ಞಾನ ಅಲ್ಪ. ನಿಬಂಧನನು ಸಾರ. ಅವರು ಕೆಂಪು ಚರ್ಮದವರು, ಸಮತಾಂಭಗಳಲ್ಲಿ ಪ್ರಸಿದ್ಧವಾದ ಗರಿಗಳ ಶಟಿರಂಸನ್ನು ತೊಡವವರು ಎಂಬುದಕ್ಕಿಂತ ಇನ್ನೇನು ಹೆಚ್ಚು ಗೊತ್ತಿಲ್ಲ

ಅನೇಕ ಇಂಡಿಯನ್ ಪಂಗಡಗಳು, ಹೇಗಾದರೂ, ಉನ್ನತ ಮಟ್ಟದ ನಾಗರಿಕತೆ ಕುರಿತು ಜಂಭ ಕೊಚ್ಚಬಹುದು. ರಜಿಕ್ಟ್ ವಾತ್ ಇಂಕಾಸ್‌ನ ಕಲೆ ಅತಿ ಶ್ರೇಷ್ಠ ದರ್ಜೆಯಲ್ಲಿ ನಿಂತಿತು. ಅಷ್ಟಲ್ಲದೆ ಅವರ ಜ್ಞಾನ ಇತರ ಪ್ರದೇಶಗಳಲ್ಲೂ ವಿಶಾಲವಾಗಿತ್ತಿತು ಮಧ್ಯ ಹಾಗೂ ದಕ್ಷಿಣ ಅಮೇರಿಕದ ಇಂಡಿಯನ್ನರು ಪ್ರಸಿದ್ಧರಾದ ವೂಲಿಕೆ ಬಲ್ಲನು. ಈ ವಿಶೇಷ ವಿಜ್ಞಾನದ ಜ್ಞಾನ ವಂಶ ಪಾರಂಪರ್ಯವಾಗಿ ವಿಶ್ವ ಕಾಲಗಳಲ್ಲಿಯೂ ಹಸ್ತಗತವಾಗುತ್ತಿದೆ ಬಹುವಾಗಿ ಎಲ್ಲಾ ಕಾಯಿಲೆಗಳಿಗೂ ನಿಗದಿಯಾದ ಔಷಧ ಮೂಲಿಕೆಗಳು ಗೊತ್ತಾಗಿದೆ. ಕೆಲವು ವರ್ಷಗಳ ಹಿಂದೆ ಪ್ರಕಟವಾದ ಪುಸ್ತಕದಲ್ಲಿ, 400 ಕ್ಕೆ ಕಡಿಮೆ ಇಲ್ಲದೆ ಔಷಧ ಮೂಲಿಕೆಗಳು ಪಟ್ಟಿ ಮಾಡಲ್ಪಟ್ಟಿದ್ದುವು.

ಹೆಸರಾದ '' ವ್ಯಾನ್ ಜಾನಿಲ್ಲೊ '' ಎಂಬ ಒಂದು ವಿಧದ ಟಿ ಸರ್ಫಟಿಡ್ ಹೊಟ್ಟೆಗೆ ಮತ್ತು '' ಲುಪಾಂಕೆ '' ಎಂಬ ಒಂದು ಒಣಗಿದ ದ್ಯಾಂಟಲ್ ಪಾವಿನ ಕಡಿತಕ್ಕೆ ಪೌಲ್ಟಿಸ್ಟ್ ಕಟ್ಟಲು ವತ್ತು ಚೇಳು ಕಡಿತಕ್ಕೆ ಉಪಯೋಗಿಸಲಾಗುವುದು. ಮೂಳೆ ವರಿದಿರುವುದು ಹಾಗೂ ಮೂಂಸ ಗಾಯುಗಳನ್ನೂ ಒಂದು ವಿಧದ ಕ್ಯಾಕ್ಟಸ್ ಎಲೆಗಳಿಂದ ಗುಣ ಮಾಡುವುದು ಪ್ರಸಿದ್ಧವಾಗಿದೆ

ಸಿಂಕೋನ ತೊಗಟೆಯ ಲ್ಲಿ ವ ಲೇರಿಯ ಔಷಧ ವೀಯುವುದು ಪ್ರಾಚೀನ '' ಇಂಕಾಸ್ '' ನ ಪ್ರಪಂಚ ಪ್ರಸಿದ್ಧ ಔಷಧ ಅದರಲ್ಲಿನ ಗುಣಕಾರಿ ಶಕ್ತಿಯನ್ನು ಕಂಡು ಹಿಡಿದವರು ಇಂಡಿಯನ್ನರು ಮತ್ತು ಈ ದಿನದವರಿಗೆ ಈ ಪ್ರಾಕೃತಿಕ ವಸ್ತು ಅಪಾಯಕಾರವಾದ ಮಲೇರಿಯಾ ಜ್ವರಗಳಿಗೆ ಸಿದ್ಧೌಷಧವಾಗಿದೆ

1938 ರಲ್ಲಿ, ಈಗ ಸ್ಥಗಿತವಾಗಿರುವ ಲೀಗ್ ಆಫ್ ನೇಷನ್ಸ್‌ನ ಮಲೇರಿಯ ಪರಿಣಿತರ ಸಮಿತಿ, ಮಲೇರಿಯ ಬಾಧಿತ ಪ್ರದೇಶಗಳಲ್ಲಿ ಕ್ವಿನೈನ್ 5 ½ ದಿನಗಳ ವರೆಗೆ ತೆಗೆದುಕೊಳ್ಳಲೇ ಬೇಕ ಮತ್ತ ನಿರೋಧಕಾರ್ಥ ಮಲೇರಿಯ ಕಾಲದಲ್ಲಿ ಪ್ರತಿ ದಿನ 6 ಗ್ರೈನುಗಳಷ್ಟು ಕ್ವಿನೈನ್ ತೆಗೆದುಕೊಳ್ಳಲೇ ಬೇಕು ಕ್ವಿನೈನ್ ಯೋಗ್ಯ ಸಿದ್ಧೌಷಧ ಎಂದು ಮತ ಮಾಡಿದೆ

ಉಡ್‌ಲ್ಯಾಂಡ್ಸ್ 29—12—50 ರಿಂದ

ಬೇಗಂ ಪ್ಯಾರ, ಗೀತಾ ಬಾಲಿ, ಭಾರತ ಭೂಷಣ ಪಾತ್ರವಹಿಸಿರುವ

ಸೊಹಾಗ್‌ರಾತ್

ಸಂಗೀತ ನೃತ್ಯಮಯ ಸುಂದರ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ರಣಜಿತ್ ಅಮೋಘ 3 ನೇ ವಾರ

ಸರ್ಗಂ Sargam

ರೆಹನಾ — ರಾಜ ಕಪೂರ್ — ಪಾರೋ — ಮನ್ನಾ ಜಲ್ಲಿ — ಓಂಪ್ರಕಾಶ್

ಅಭಿನಯದಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ

ಸಂಗೀತ ಪ್ರಿಯರೂ ನೋಡಬೇಕಾದ ಚಿತ್ರ — ಪ್ರತಿ ದಿನ 3 ಪ್ರದರ್ಶನಗಳು

ಅಪೇರಾ 30—12—50 ರಿಂದ

ಶ್ರೀ ಕೃಷ್ಣನ ಮನಸೆಳೆವ ಬಾಲಲೀಲೆಗಳು, ಕಂಸ ವಧೆ ಸಂಬಂಧದ ದೃಶ್ಯಗಳು ಕಂಡಲಾಪುಲಕವಾಗಿ ಪ್ರದರ್ಶಿಸುವ ಸೊಗಸಾದ ತಮಿಳು ಚಿತ್ರ

ಕೃಷ್ಣವಿಜಯ

ಪ್ರೇಮಾವತಿ, ಸಂಸಿಂಹ ಭಾರತಿ, ಲಲಿತ, ಪದ್ಮಿನಿ ಅಭಿನಯಿಸಿರುವರು

ಪ್ರತಿ ದಿನ 3 ಆಟಗಳು

ಶುಭಾಶಯ

ನೂತನ ವರ್ಷದಲ್ಲಿ ಎಲ್ಲರಿಗೂ ಭಗವಂತನು ಶುಭವನ್ನುಂಟು ಮಾಡಲಿ — ಸತ್ಯವಾದಿ.

ರಜ ಮಂಜೂರು

ಜನವರಿ ತಾ॥ 26 ರಲ್ಲಿ ಸರ್ಕಾರಿ ಕಾರ್ಖಾನೆಗಳು ಕೆಲಸಗಾರರಿಗೆ ಸಂಬಳ ಸಹಿತ ರಜಾ ಕೊಡಬೇಕೆಂದು ಸರ್ಕಾರ ಸೂಚಿಸಿದೆ ಎಂದು ದೆಹಲಿ ವಾರ್ತೆ

ಜವುಳಿ ವರ್ತಕರ ಸಂಘ

ನಿನ್ನೆ ದಿವಸ ಮೈಸೂರು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಪೌರ ಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಮೈಸೂರು ಜವುಳಿ ವರ್ತಕರ ಸಂಘದ 7 ನೇ ವಾರ್ಷಿಕೋತ್ಸವ ಜರುಗಿತು. ಕಾರ್ಯದರ್ಶಿ ಶ್ರೀ ರುದ್ರಪ್ಪನವರು ವರದಿ ಪಠಿಸಿದರು. ಅಧ್ಯಕ್ಷರು ಎಲ್ಲರಿಗೆ ರಾಮಚಂದ್ರರಾಯರು ಸ್ವಾಗತಿಸಿದರು. ಶ್ರೀಮತಿ ನಾಗರತ್ನಮ್ಮನವರಿಂದ ಸಂಗೀತ ಕಚೇರಿ ಏರ್ಪಾಟಾಗಿತ್ತು.

ಮೈಸೂರು ಜಿಲ್ಲಾ ಸಭೆ

ಶ್ರೀ ಹೆಚ್. ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೊನ್ನೆ ಮೈಸೂರು ಜಿಲ್ಲಾ ಸಭೆ ಜರುಗಿ ಅನೇಕ ವಿಷಯಗಳ ಠರಿಕಾರ್ಡಾದವು

ಸಂಮೇಳನ

ಮೈಸೂರು ಜ 1—ಮೈಸೂರು ಸಂಸ್ಥಾನದ ಪ್ರಾಂತೀಯ ಸಹಕಾರ ಸಮ್ಮೇಳನವು ನಿನ್ನೆ ಮತ್ತು ಮೊನ್ನೆ ಲೋಕಲ ರೇಟರ್ಸ್ ಹೋಮಿನಲ್ಲಿ ನಡೆಯಿತು. ಗೃಹ ಮಂತ್ರಿ ಶ್ರೀ ವಂರಿಯಪ್ಪಸವರು ಪ್ರಾರಂಭೋತ್ಸವ ನೆರವೇರಿಸಿದರು

ಅನಾವರಣ

ಮೈಸೂರು ಜ 1— ಮೈಸೂರು ಪ್ರಾಂತೀಯ ಸಹಕಾರ ಸಂಸ್ಥೆಯ ಸ್ಥಾಪಕರಾದ ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ದಿವಂಗತ ಶ್ರೀ ಎಂ. ಶಾಮರಾಯರ ಭಾವಚಿತ್ರ ಅನಾವರಣವು ನೆರವೇರಿತು

ಹಾನನದ

ದನಗಳ ಜಾತ್ರೆ

ಮತ್ತು ವಸ್ತು ಪ್ರದರ್ಶನ

— ಜನವರಿ —

1 ನೇ ತಾರೀಖಿನಿಂದ

— ಕ್ಯಾಟಲ್ ಷೋ ಕಮಿಟಿ.

ಆಹಾರ ಸಂಸ್ಥೆಗೆ ಸಂದರ್ಶನ

ಈ ಬೆಳಿಗ್ಗೆ ನಾನಾ ದೇಶಗಳ ಪ್ರಮುಖ ವಿಜ್ಞಾನಿಗಳು (ಅನೇಕರು ಅಣುಶಕ್ತಿಯ ಒಗ್ಗೆ ಕೆಲಸ ಮಾಡಿದ್ದಾರೆ) ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಸಂದರ್ಶನವನ್ನಿತ್ತರು ಸಂಶೋಧನಾಲಯದ ಡೈರೆಕ್ಟರ್ ಡಾ॥ ವಿ ಸುಬ್ರಹ್ಮಣ್ಯರು ಸರ್ವರನ್ನೂ ಸ್ವಾಗತಿಸಿ ನೂತನ ಸಂವತ್ಸರದ ಶುಭಾಶಯ ಕೋರಿದರು

ನೆಹರು ಆಗಮನ

ಬೆಂಗಳೂರಿಗೆ ಪಂ॥ ನೆಹರು ಆಗಮನ ಈ ಮಧ್ಯಾಹ್ನ 3-15 ಗಂಟೆಗೆ

ಮುತಾಂತರ

ಶಿರಾಳ ಕೊಪ್ಪದಲ್ಲಿ 30 ಮಂದಿ ಹಿಂದೂ ಸ್ತ್ರೀಯರು ಮಹಮ್ಮದೀಯ ಮತಕ್ಕೆ ಬಲಾತ್ಕಾರವಾಗಿ ಮತಾಂತರಿಸಲ್ಪಟ್ಟಿದ್ದಾರೆ ಮತ್ತು ವೀರಶೈವ ದೇವಾಲಯಗಳ ವಿಗ್ರಹಗಳನ್ನು ಭಿನ್ನಮಾಡಲಾಗಿದೆ ಎಂದು ಗೊತ್ತಾಗಿದೆ

‡ ಗಡಿನಾಡಿನ ಗಾಂಧಿ ಆರೋಗ್ಯ ನಶಿಸುತ್ತಿರುವುದಾಗಿ ಅಲ್ಲಿನ ಮಾಜಿ ಸಚಿವ ಮಹಮ್ಮದ್ ಯಾಹಿಯಾ ಖಾನ್ ತಿಳಿಸಿದ್ದಾರೆ.

‡ ಸಾವಿರ ಮಂದಿಯ ಜನಗಣತಿಗೂ 43 ವೆಚ್ಚವಾಗುವುದೆಂದು ದೆಹಲಿ ವಾರ್ತೆ.

ಕಾಮನ್‌ವೆಲ್ತ್ ಕೂಟಕ್ಕೆ ಪಾಕ್ ಬಾರದಿರುವ ಬಗ್ಗೆ ದಿಲ್ಲಿ ನೃತ್ಯಗಳಲ್ಲಿ ಬಿಲೆಯೇ ಇತ್ತಿಲ್ಲ.

× ಕಾಶ್ಮೀರದ ಬಗ್ಗೆ ರಹಸ್ಯ ಸಮ್ಮೇಳನ ಜರುಗಿತೆಂದು ಕರಾಚಿ ವಾರ್ತೆ. ಪ್ರಧಾನಿ ಲಿಯಾಕತ್ ಲಂಡನ್ ಯಾತ್ರೆ ವಜಿಂದುವರಿಸಿದರು.

× ಲಂಡನ್ ಕಾಮನ್‌ವೆಲ್ತ್ ಕೂಟದಲ್ಲಿ ಫಕ್ರುನಿಸ್ಸಾನ್ ಪ್ರಶ್ನೆ ಸೇರಿಸಬೇಕೆಂದು ಮೌಲಾನಾ ಮಹಮ್ಮದ್ ಅಕ್ಬರ್ ಖಾನ್ ದಿಲ್ಲಿಯಲ್ಲಿ ತಿಳಿಸಿದ್ದಾರೆ.

ಸಂಪುಟ ೯ ಸಂಚಿಕೆ ೧೬ ॥ಶ್ರೀ॥ ತಾ॥ 1-1-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಪೂಜ್ಯ ಶ್ರೀ ಕರಪಾತ್ರೀ ಸ್ವಾಮಿಗಳವರ ಎರಡು ಭಾಷಣ

— ಸರ್ವಥಾ ಸಂಾಧೀನವಾದ ಬುದ್ಧಿಯು — ಶಾಸ್ತ್ರಕ್ಕಿಂತ ದೊಡ್ಡದು ಹೇಗೆ?

(ಮುಂದುವರಿದುದು)

ಆಧುನಿಕ ದೃಷ್ಟಿಯಲ್ಲಿ ಕೇವಲ ಪ್ರತ್ಯಕ್ಷನೇ ಪ್ರಮಾಣವಾಗಿದೆ. ಕಿಂತು ಅನುಮಾನ ಪ್ರಮಾಣವನ್ನೊಪ್ಪದೆ ಕೆಲಸ ನಡೆಯುವಂತಿಲ್ಲ. ಕಾರಣವೇನೆಂದರೆ ಆಗ ಪ್ರತ್ಯಕ್ಷವೇ ಪ್ರಮಾಣವೆಂದು ಸಹ ಹೇಳಲಾಗುವುದಿಲ್ಲ ಅವನೊಂದು ವೇಳೆ ಎಲ್ಲವನ್ನೂ ಕುರಿತು ಹೇಳುತ್ತಾನಾದರೆ. ಹೇಳುವವನು ಉನ್ಮತ್ತನು, ಬುದ್ಧಿವಂತನು ಆ ಕಡೆ ಪ್ರವೃತ್ತನೇ ಆಗಲಾರನು. ಒಂದು ವೇಳೆ ಅಜ್ಞಾನಿಗಳನ್ನಾಗಲೀ ಸಂಶಯಾಳು ಜಿಜ್ಞಾಸುಗಳನ್ನಾಗಲೀ ಕುರಿತು ಹೇಳುವನಾದರೆ ಇತರ ಅಜ್ಞಾನ ಸಂಶಯ ವಿಪರ್ಯಯಗಳನ್ನು ಅವನು ಹೇಗೆ ಅರಿತನು ? ಅನುಮಾನದಿಂದಲೆ ? ಪ್ರತ್ಯಕ್ಷದಿಂದಲೆ ? ಆದ್ದರಿಂದಲೇ ಅನುಮಾನವನ್ನಾದರೂ ಪಶು ಪಕ್ಷಿಗಳೂ ಮಾಡಿಕೊಳ್ಳುತ್ತವೆ. ಅನಧಿಗತ ಅಬಾಧಿತಾರ್ಥ ಬೋಧಕತ್ವವೇ ಪ್ರಮಾಣಗಳ ' ಪ್ರಾಮಾಣ್ಯ ' ವಾಗಿದೆ. ಹೀಗಿರುವಾಗ ಅನುಮಾನಕ್ಕೆ ಅನಧಿಗತ ಅಬಾಧಿತಾರ್ಥ ಬೋಧಕತೆಯಿಲ್ಲವೆಂಬುದನ್ನಾದರೂ ಹೇಗೆ ತಿಳಿಯಬಹುದು ?

ದೇವರೂ ಧರ್ಮಸತ್ಕೆಯೂ ಮಾನಪೋನ್ನತಿಯಲ್ಲಿ ಬಾಧಕವೆಂದು ಸಮಾಜವಾದೀ – ಸಾಮ್ಯವಾದೀ ಜನರು ಹೇಳುತ್ತಾರೆ. ಅವರ ಸಿದ್ಧಾಂತವೇನೆಂದರೆ ಹೇಗೆ ಅಮ್ರಬೀಜವೇ ಅಂಕುರಾದಿ ರೂಪದಿಂದ ಪರಿಣತವಾಗುತ್ತದೋ ಹಾಗೆಯೇ ರಜೋವೀರ್ಯರೂಪದಿಂದ ಪರಿಣತವಾದ ಮಹಾಭೂತವೇ ದೇಹಾದಿಗಳಂತೆ ಚೇತನ ರೂಪದಲ್ಲಿಯೇ ಪರಿಣತವಾಗುತ್ತದೆ. ಇನ್ನು ಬಡಪಾಯಿ ದೇವರ ಪಾಡೇನು ? ಕಿಂತು ಇದೆಲ್ಲ ' ಭೂತಭೌತಾನಿ ಸೋಪಾದಾನಗೋಚರಾಪರೋಕ್ಷ ಜ್ಞಾನವಜ್ಜನ್ಯಾನಿ ಕಾರ್ಯತ್ವಾತ್ ಶಯ್ಯಾಪ್ರಾಸಾದಾದಿವತ್ ' ಎಂಬ ಅನುಮಾನದಿಂದ ಈಶ್ವರಸಿದ್ಧಿಯಾಗುತ್ತದೆ ಅಚೇತನಗಳ ಪ್ರವೃತ್ತಿಯು ಚೇತನಾಧಿಷ್ಠಿತವಾಗಿರುತ್ತದೆಂದೇ ಉದಾಹರಣೆಯಿಂದ ದೇಹಾದಿಗತಿರಿಕ್ತನಾದ ಆತ್ಮನ ಸಿದ್ಧಿಯಾಗುತ್ತದೆ. ಘಟಾದಿಗಳ ಅಪರೋಕ್ಷತಾ ಆಲೋಕವು ಚಕ್ಷುರಾದಿ ಸಾಪೇಕ್ಷವಾಗಿದೆ. ಕಿಂತು ಸತ್ವನಿಂಪೇಕ್ಷ ಅಪರೋಕ್ಷತೆಯು ಆತ್ಮಸದ್ಭಾಗಿದೆ

ಪ್ರತ್ಯಕ್ಷಾನುಮಾನಾಶ್ರಿತಾ ಮತಿಯು ಗತಿಯು ಎಲ್ಲಿಯವರೆಗಿರುವುದೊ, ಅಲ್ಲಿಯವರೆಗೇ ಯಾವನು ಮನ್ನಿಸುವನೋ ಅವನು " ವಾಸಂ ' ಹಾಗೂ ಶಾಸ್ತ್ರದವರೆಗೆ ಮನ್ನಿಸುವವರು ' ಸಂ ' ರಾಗುತ್ತಾರೆ. ವಾಸ್ತವಿಕ ವಿಷಯವೇನೆಂದರೆ, ಶಬ್ದಪ್ರಮಾಣವಿಲ್ಲದೆ ಲೌಕಿಕ ವ್ಯವಹಾರವೂ ನಡೆಯುವಂತಿಲ್ಲ ತಸ್ಮೆ ಮಾತಾಪಿತರ ಜ್ಞಾನವೂ ಶಬ್ದದ ಆಧಾರದ ಮೇಲೆಯೇ ಆಗುತ್ತದೆ. ಆಗಲೇ ಪ್ರಾಣಿಯು ಪಾಯಿಕ್ಕ ಭಾಗಿಯಾಗಬಲ್ಲನು. ಆದ್ದರಿಂದ ಶಾಸ್ತ್ರಪ್ರಮಾಣವನ್ನು ಮನ್ನಿಸುವುದು ಉಚಿತವಾಗಿದೆ ಹಾಗೂ ಶಾಸ್ತ್ರ ಪರಾಧೀನವಾದ ಬುದ್ಧಿಗೇ ಮಹತ್ವ ವಿದೆ ಅದರಿಂದಲೇ ಅಭ್ಯುದಯ ನಿಶ್ರೇಯಸಗಳ ಸ್ವರೂಪವೂ ಸಾಧನದ ಸ್ವರೂಪವೂ ಜ್ಞಾತವಾಗುವುದಲ್ಲದೆ ಪರಮ ಕಲ್ಯಾಣವಾಗುವುದು.

ಲೋಕ ಕಲ್ಯಾಣಕ್ಕಾಗಿ

ಲೌಕಿಕ ಸಾಧನಗಳ ಆಶ್ರಯ ಪಡೆಯುವುದು ಮೂರ್ಖತನ. ಪ್ರಕೃತಿಯ ಕೋಪದಿಂದ ವಿನಾಶ ಅವಶ್ಯಂಭಾವಿ. ಧರ್ಮದ ಆಶ್ರಯವು ಪರಮಾವಶ್ಯಕ

— ಪೂಜ್ಯ ಶ್ರೀ ಸ್ವಾಮಿ ಕರಪಾತ್ರಿಗಳ ಭಾಷಣ —

ಕಾಶಿಯ ಆರ್ಯ ಮಹಿಳಾ ವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಶ್ರೀ ಸ್ವಾಮಿಗಳವರು ಹೀಗೆಂದರು :— ಭಗವನ್ನಾಮ ಸ್ಮರಣೆ ಮಾಡುತ್ತಾ ಸ್ವಧರ್ಮದಲ್ಲಿ ನಿಷ್ಠೆಯೂ, ಅಧರ್ಮದಿಂದ ನಿವೃತ್ತಿಯೂ, ಪರಸ್ಪರ ಸದ್ಭಾವನೆಯೂ ಇಂಟಾದರೆ ವ್ಯಷ್ಟಿ-ಸಮಷ್ಟಿ ಸರ್ವರ ಕಲ್ಯಾಣವಾಗುವುದು. ಧರ್ಮದ ರಕ್ಷಣೆಗಾಗಿಯೂ ಅಧರ್ಮಾಭ್ಯುತ್ಥಾನದ ಆಳವಿಗಾಗಿಯೂ ನಿರ್ಗುಣ ನಿರಾಕಾರ ಭಗವಂತನು ವ್ರಜೇಂದ್ರ ನಂದನನ ರೂಪದಲ್ಲಿ ಅವತಾರವೆತ್ತುವನು ಹೇಗೆ ಯಾವುದೇ ವ್ಯವಹಾರಕ್ಕಾಗಿ ಸ್ಪಷ್ಟ ಪ್ರಕಾಶವು ಆವಶ್ಯಕವೊ ಹಾಗೆಯೇ ಸಾಮಾಜಿಕ, ಧಾರ್ಮಿಕ, ರಾಷ್ಟ್ರೀಯ, ಅಂತರಾಷ್ಟ್ರೀಯ ವ್ಯವಹಾರವನ್ನು ಸಡೆಯಿಸಲು, ಲೌಕಿಕ, ಪಾರಲೌಕಿಕ ಅಭ್ಯುತ್ಥಾನ ಮತ್ಕರ್ಷಗಳ ಸಾಧನಗಳಲ್ಲಿ ಜ್ಞಾನಕ್ಕಾಗಿಯೂ ಶಾಸ್ತ್ರವು ಅಪೇಕ್ಷಿತವಾಗುತ್ತದೆ. ಲೋಕದಲ್ಲಿ ತಮ್ಮ ಪಾತಿತ್ಯಸಿದ್ಧಿಗಳ ಪರಿಜ್ಞಾನವು ಪ್ರತ್ಯಕ್ಷ ಅಥವಾ ಅನುಮಾನ ಪ್ರಮಾಣದಿಂದಾಗದೆ ಶಬ್ದಪ್ರಮಾಣದಿಂದಲೇ ಆಗುತ್ತದೆ. ಅನುಮಾನ ಪ್ರಮಾಣದಲ್ಲಿ ಪಶು ಮುಂತಾದುವೂ ಚತುರವಾಗಿವೆ. ರೊಟ್ಟಿಯನ್ನು ನೋಡಿ ಪ್ರವೃತ್ತವಾಗುವುದನ್ನೂ ದಂಡವನ್ನು ನೋಡಿ ಓಡುವುದನ್ನೂ ಅವೂ ಬಲ್ಲುವು. ಯಾವು ಪ್ರತ್ಯಾಕ್ಷಾನುಮಾನಾಶ್ರಿತಾವಾಪ್ತಿಯ ಗತಿಯ ತನಕವೇ ತತ್ಪ್ರಸ್ಥವೆಂದು ತಿಳಿಯುತಾರೊ ಅವರ ಗಣನೆಯನ್ನು ವಾನರಗಳಿಗಿಂತ ಹೆಚ್ಚಾಗಿ ಮಾಡಲಾಗುವಂತಿಲ್ಲ ಯಾವುದೇ ಕಾರ್ಯದ ಔಚಿತ್ಯಾನೌಚಿತ್ಯವನ್ನು ತಿಳಿಯುವುದಕ್ಕಾಗಿ ಕಾವ ಕ್ರೋಧ ಲೋಭಾದಿಗಳ ವೇಗವನ್ನು ತಡೆಯುವುದೂ ಬುದ್ಧಿಯ ಶಾಂತತೆಯೂ ಬೇಕಾಗಿರುತ್ತದೆ. ವೇಗವನ್ನು ತಡೆಯುವುದಕ್ಕೆ ಏಕ ಮಾತ್ರ ಸಾಧನವುಳ್ಳವಾಗಿದೆ ಆದ್ದರಿಂದಲೇ ಗೀತಾಕಾರನು ಕರ್ತವ್ಯದ ನಿರ್ಣಯವನ್ನು ಶಾಸ್ತ್ರದ್ವಾರಾ ಸಂಪಾದಿಸಲು ತಿಳಿಸಿರುವನು. ಧಾರ್ಮಿಕ ವ್ಯವಸ್ಥೆಯು ರಕ್ಷಣೆಗಾಗಿಯೇ ಭಗವಂತನ ಅವತಾರವಾಗುತ್ತದೆ ಮಾತ್ಸ್ಯನ್ಯಾಯದ ದುರವಸ್ಥೆಯನ್ನು ದೂರಗೊಳಿಸುವುದಕ್ಕಾಗಿ ಶಾಸನವು ಅಪೇಕ್ಷಿತವಾಗಿರುತ್ತದೆ ಎಂದಿನಿಂದ ನಿಯಮ್ಯನೊ ಅಂದಿನಿಂದಲೇ ನಿಯಾಮಕನೂ ಮತ್ತಿಂದಿನಿಂದಲೇ ನಿಯಂತ್ರಣದ ವಿಧಾನವೂ ಇರಬೇಕು ಆದ್ದರಿಂದಲೇ ಅನಾದಿ ಜೀವ ಜಗತ್ಕಲ್ಯಾಣಕ್ಕಾಗಿ ಅನಾದಿ ಪರಮಾತ್ಮನ ವಿಧಾನವೂ ಅನಾದಿಯಾಗಿರಬೇಕು. ಅದೇ ಪರಮೇಶ್ವರಿಯ ವಿಧಾನವು ವೇದ. ತಿಣ್ಣ ತಂಗಿಯರ ಮದುವೆಯ ಔಚಿತ್ಯಾನೌಚಿತ್ಯದ ನಿರ್ಣಯವನ್ನು ಪ್ರತ್ಯಾಕ್ಷಾನುಮಾನದ ಆಧಾರದ ಮೇಲೆ ಮಾಡಲಾಗುವಂತಿಲ್ಲ. ಅದಾದರೋ ಶಾಸ್ತ್ರದ ಮೂಲಕವೇ ಅರಿಯಲ್ಪಡತಕ್ಕದ್ದು. ಧರ್ಮದ ರಕ್ಷಣೆಗಾಗಿ ಭಗವಂತನ ಅವತಾರವಾದಾಗ ಅವನ ತುಂಬಾ ಸ್ತೋಚಕವಾದ ಲೀಲೆ ನಡೆಯುತ್ತದೆ. ಸಿನಿಮಾ ಮುಂತಾದುವು ಅದರ ಸ್ತೋಡಷಾಂಶವೂ ಆಗಲಾರದು. ವಿಧಿನಿಷೇಧವು ಸಾಧನದಲ್ಲಿರುವುದೇ ಹೊರತ್ಯ ಫಲದಲ್ಲಲ್ಲ ಭಗವಾನ್ ಕೃಷ್ಣನು ಫಲವೇ ಹೊರತು ಸಾಧನವಲ್ಲ ಸಮಾಜವಾದಿಗಳಾಗಲಿ ಧರ್ಮ ನಿರಪೇಕ್ಷಿತವಾದಿಗಳಾಗಲಿ ರೊಟ್ಟಿ ಬಟ್ಟೆಯ್ಯ ವ್ಯವಸ್ಥೆ ಮಾಡುವುದರಲ್ಲಿಯೇ ತಮ್ಮ ಇತಿ ಕರ್ತವ್ಯತೆಯು ಸಮಾಪ್ತವಾಯಿತೆಂದು ತಿಳಿಯುವರು, ಆದರೆ ಅದೂ ಉಚಿತವಾಗಿ ಆಗಲಿಲ್ಲ. ಅಹಾರ ಉತ್ಪಾದನಕ್ಕಾಗಿ ಗೋಚರ ಭೂಮಿಯನ್ನು ಉತ್ತೊಡನೆ ದೈವೀ ಕೋಪವು ಮೇಲಿನಿಂದ ಬಂದು ಬಿಟ್ಟಿತು. ಧಾರ್ಮಿಕ ವ್ಯವಸ್ಥೆಯಿಲ್ಲದ ಎಲ್ಲರ ರಕ್ಷಣೆಯು ಗ್ಯಾರಂಟಿಯನ್ನು ಕೇವಲ ಲೌಕಿಕ ಸಾಧನಗಳ ಮೇಲೆ ಕೊಡುವುದು ಶಾಸ್ತ್ರಜ್ಞರ ದೃಷ್ಟಿಯಲ್ಲಿ ಇದಕ್ಕಿಂತ ಹೆಚ್ಚಿನ ಮೂರ್ಖತನವು ಇನ್ನೆವುದೂ ಇಲ್ಲ. (ಸಶೇಷ)

Edited, Printed and Published by M. S. Krishna Rao, at the Satyavadi Press, Chamrajpuram Mysore